**DW-1:** ಕಮಲಮ್ಮ

ದಿನಾಂಕಃ **06.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಎನ್.ಎನ್.ಆರ್. ವಕೀಲರಿಂದಃ**

1. ನನಗೆ 75 ವರ್ಷ ವಯಸ್ಸಾಗಿದೆ. 1962 ರಲ್ಲಿ ನನಗೆ 13 ವರ್ಷ ಇತ್ತು ಎಂಬುದು ನನಗೆ ಗೊತ್ತಿಲ್ಲ. ನನ್ನ ಮದುವೆ ಯಾವ ವರ್ಷದಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಯಾವ ವರ್ಷದಲ್ಲಿ ಹುಟ್ಟಿರುತ್ತೇನೆ ಗೊತ್ತಿಲ್ಲ. 1962 ನೇ ಇಸವಿಯಲ್ಲಿ ನನ್ನ ಗಂಡನಿಗೆ ಎಷ್ಟು ವಯಸ್ಸಾಗಿತ್ತು ನನಗೆ ಗೊತ್ತಿಲ್ಲ. ನನ್ನ ವಿವಾಹಕ್ಕೂ ಮೊದಲೇ ಸ್ವತ್ತನ್ನು ಖರೀದಿ ಮಾಡಿದ್ದೇವು. ವಿವಾಹಕ್ಕೂ ಮುನ್ನ ಏನೇನು ವ್ಯವಹಾರಗಳು ಆಗಿವೆ ನನಗೆ ಗೊತ್ತಿಲ್ಲ. 1963 ರಲ್ಲಿ ನನ್ನ ಗಂಡನಿಗೆ ಯಾವುದೇ ಆದಾಯವಿಲ್ಲದ ಕಾರಣ ಸಾಲ ಮಾಡಿಕೊಂಡಿದ್ದರು ಎಂದರೆ ಸರಿ. ಸಾಲವನ್ನು ನಾವೇ ತೀರಿಸಿದ್ದೇವೆ. ನಿಡಿ.2 ರ ದಾಖಲೆಯನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ಗಂಡ ಸ್ವತ್ತನ್ನು ಕೊಡಿಸಿರುವ ಬಗ್ಗೆ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ.3 ರ ಊಯಿಲಿನಲ್ಲಿ ಲಕ್ಷ್ಮಮ್ಮ ರವರ ವಯಸ್ಸು 59 ವರ್ಷ ಎಂದು ಇದೆ ಎಂದರೆ ಸರಿ.

2. ನಾನು ಹಾಜರುಪಡಿಸಿರುವ ನಿಡಿ.8 ರಂತೆ ಲಕ್ಷ್ಮಮ್ಮ ರವರು 1994 ರಲ್ಲಿ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. 1994 ರಲ್ಲಿ ಆಕೆಗೆ 95 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಊಯಿಲು ಬರೆಯುವ ಕಾಲಕ್ಕೆ 85 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 60 ವರ್ಷ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮ ರವರಿಗೆ 95 ವರ್ಷ ವಯಸ್ಸಾಗಿದ್ದು ಅವರಿಗೆ ನಡೆದಾಡಲು ಆಗುತ್ತಿರಲಿಲ್ಲ ಮತ್ತು ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಕೆ ಸಾಯುವ ಸಂದರ್ಭ ಹಾಸಿಗೆ ಹಿಡಿದಿದ್ದು ನಾನೇ 5 ವರ್ಷ ಆಕೆಯನ್ನು ಪಾಲನೆ ಮಾಡುತ್ತಿದ್ದೆ. ಆಕೆ ಹಾಸಿಗೆ

ಹಿಡಿದಿದ್ದು ನಡೆದಾಡಲು ಸಾಧ್ಯವಿಲ್ಲದೇ ಇದ್ದರೂ ನಾನು ಮತ್ತು ನನ್ನ ಗಂಡ ಊಯಿಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ ನಾವು ಪತ್ರವನ್ನು ನೋಡಿದ್ದೇವೆ. ಆಕೆಗೆ ಅನಾರೋಗ್ಯವಿದ್ದು ನನ್ನ ಗಂಡ ಊಯಿಲನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಊಯಿಲಿಗೆ 4 ಜನ ಸಾಕ್ಷಿ ಸಹಿ ಮಾಡಿದ್ದಾರೆ. ನನ್ನ ಗಂಡ ಊಯಿಲನ್ನು ಸೃಷ್ಟಿ ಮಾಡಿದ್ದು ನನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ.

3. ಆನಂದಚಾರ್ ರವರ ಸರ್ಕಾರಿ ಉದ್ಯೋಗದಲ್ಲಿ ಇದ್ದರು ಎಂದರೆ ಸರಿ. 1958 ರಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿಕೊಂಡಿದ್ದರು ಎಂದರೆ ಸರಿ. ಅವರೇ ದುಡಿದು ತನ್ನ ತಾಯಿಯ ಹೆಸರಿನಲ್ಲಿ ಆಸ್ತಿ ಇಲ್ಲ ಎಂಬ ಕಾರಣ ಆಕೆಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಆಸ್ತಿ ಇರಲಿಲ್ಲ ಅವರು ಕೆಲಸಕ್ಕೆ ಸೇರಿದ ನಂತರ ನಾವು ದುಡಿದು ಖರೀದಿಸಿದ್ದೇವೆ. ನಿಡಿ.11 ಪ್ರಕರಣದಲ್ಲಿ ವಾದಿ ಮತ್ತು ಅವರ ತಂದೆ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ಶಂಕರಚಾರ್ ರವರು ಸರ್ಕಾರಿ ನೌಕರಿಯಲ್ಲಿ ಇದ್ದರು ಎಂದರೆ ಸರಿ. ಶಂಕರಚಾರ್ ಮತ್ತು ಆನಂದಚಾರ್ ರವರು ಸರ್ಕಾರಿ ಉದ್ಯೋಗದಲ್ಲಿ ಇದ್ದು ನನ್ನ ಗಂಡ ನಿರುದ್ಯೋಗಿಯಾಗಿದ್ದರಿಂದ ಅವರೇ ಆರ್ಥಿಕವಾಗಿ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸ್ವತ್ತನ್ನು ಅಭಿವೃದ್ಧಿಪಡಿಸಲು ಅವರಿಬ್ಬರೇ ನನ್ನ ಗಂಡನಿಗೆ ಮತ್ತು ಅತ್ತೆಗೆ ಹಣ ನೀಡುತ್ತಿದ್ದರು ಎಂದರೆ ಸರಿಯಲ್ಲ. ಅವರಿಬ್ಬರಿಗೆ ಮೋಸ ಮಾಡಲು ನಾನು ಮತ್ತು ನನ್ನ ಗಂಡ ಗ್ರಾಮದಲ್ಲಿ ಇದ್ದು ಊಯಿಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅವರಿಬ್ಬರೂ ಬೇರೆ ಊರಿನಲ್ಲಿ ಉದ್ಯೋಗ ಮಾಡುತ್ತಿದ್ದುದನ್ನು ದುರುಪಯೋಗಪಡಿಸಿಕೊಂಡು ನಾವು ಊಯಿಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

4. ಎಲ್ಲರಿಗೂ ಆಸ್ತಿ ಭಾಗ ಸಿಗುತ್ತದೆ ಎಂಬ ಕಾರಣ ಅವರು ಅನಾರೋಗ್ಯವಿದ್ದಾಗ ಮತ್ತು ಕಣ್ಣು ಕಾಣದೇ ಇದ್ದಾಗ ಊಯಿಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಪ್ರತಿವಾದಪತ್ರದಲ್ಲಿ ಇರುವ ವಿಚಾರಗಳು ಮತ್ತು ಮುಖ್ಯವಿಚಾರಣೆಯಲ್ಲಿ ಇರುವ ವಿಚಾರಗಳು

ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ನಾವು ನಾವು ಹೊಂದಾಣಿಕೆ ಮಾಡಿಕೊಂಡು ನಮ್ಮ ಕುಟುಂಬದಲ್ಲಿ ನಾನು ಮತ್ತು ನನ್ನ ಮಕ್ಕಳು ವಿಭಾಗ ಮಾಡಿಕೊಂಡು ದಾನಪತ್ರ ಮತ್ತು ಕ್ರಯಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ನನ್ನ ತಕಾರಾರಿನಲ್ಲಿ ಉದ್ದೇಶಪೂರ್ವಕವಾಗಿ ಬರೆಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರಗಳು ತಿಳಿಯದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.